ತಾಳೆ ಹಾಕುವುದು ಸಾಧ್ಯವೇ? ಅಜಂತಾ ವ್ಯಕ್ತವಾಗಿ ಹಾಗೆ ಮಾಡುವುದಿಲ್ಲವಾದರೂ, ನಾವು ಆ ಬಗ್ಗೆ ಯೋಚಿಸುವುದು ಸಮರ್ಪಕವೆನ್ನಿಸುತ್ತದೆ.

ಚೆನ್ನೈನ ಐಐಟಿ ಪ್ರಾರಂಭವಾದುದು ಜರ್ಮನಿ ದೇಶದ ಸಹಯೋಗದೊಂದಿಗೆ. ತಂತ್ರಜ್ಞಾನದಲ್ಲಿ ಬೌದ್ಧಿಕತೆ ಇದ್ದಷ್ಟೇ ದೈಹಿಕ ಕಾಯಕವೂ ಇರಬೇಕು. ಒಂದು ಯಂತ್ರದ ಪರಿಕಲ್ಪನೆಯಲ್ಲದೇ, ಅದನ್ನು ಕಟ್ಟುವ–ನಿರ್ಮಿಸುವ ಕೆಲಸವೂ ಇದೆ. ಅದು ಸರಿಯಾಗಿ ಕೆಲಸ ಮಾಡದಿದ್ದಾಗ – ಮರಮ್ಮತ್ತಿನ ಕಾಯಕವೂ ಇದೆ. ಹೀಗಾಗಿ, ಈ ರೀತಿಯ ತಂತ್ರಜ್ಞಾನದ ಸಂಸ್ಥೆಯಲ್ಲಿ ಸಹಜವಾಗಿಯೇ ದೈಹಿಕ ಕೆಲಸದ ಕಾಯಕದ ಜಾತಿಯೂ ಬೌದ್ಧಿಕವಾದ ದಾರಿಯಲ್ಲಿ ಬೆಳೆದು ಬಂದ – ಕಾಯಕಕ್ಕಿಂತ ವಿದ್ಯೆಗೆ ಪ್ರಾಥಮಿಕತೆ ಕೊಡುವ ಸವರ್ಣ ಜಾತಿಯವರೂ ಸಮಾನರಾಗಿ ಇರಬೇಕಾಗಿತ್ತೆಂದು ಆಶಿಸುವುದಲ್ಲಿ ಆಶ್ಚರ್ಯವಿರಬಾರದು. ಜರ್ಮನಿಯ ಸಹಯೋಗಿತ್ವ ಕೈಗಳನ್ನು ಬಳಸಿ – ಕಾಯಕಕ್ಕೆ ತೊಡಗುವುದನ್ನು ಪ್ರೇರೇಪಿಸುತ್ತದೆ. ಕಟ್ಟಿದ್ದನ್ನು ಉಪಯೋಗಿಸಿ ನೋಡದಿದ್ದರೆ ಮತ್ತೂ ಉತ್ತಮ ಯಂತ್ರವನ್ನು ಕಟ್ಟುವ ಆಲೋಚನೆ ಬರುವುದಾದರೂ ಹೇಗೆ? ಹೀಗಾಗಿಯೇ ಜರ್ಮನಿಯ ತಾಂತ್ರಿಕ ಸಂಸ್ಥೆಗಳು ಕೈಕೆಸರಾಗುವುದಕ್ಕೆ ಒತ್ತು ನೀಡುತ್ತವೆ.

ಆದರೆ, ನಮ್ಮ ಐಐಟಿಗಳು ನಡೆದು ಬಂದ ದಾರಿಯನ್ನು ಅವಲೋಕಿಸಿದಾಗ, ಭೌತಿಕ ಚಟುವಟಿಕೆಗಳಿಗೂ ಹೆಚ್ಚಿನ ಒತ್ತನ್ನು ಬೌದ್ಧಿಕ ಕಾರ್ಯಕ್ಕೆ ಕೊಟ್ಟು ಮುಂದುವರೆಯುವುದನ್ನು ನಾವು ಕಾಣಬಹುದು. ಚೆನ್ನೈನ ಐಐಟಿಯ ಮೊದಲ ದಶಕಗಳಲ್ಲಿ ಬ್ರಾಹ್ಮಣತ್ವ ಹೆಚ್ಚಾಗಿ ಕಾಣುತ್ತದೆ. ಇದಕ್ಕೆ ಕಾರಣ – ಬಹುಶಃ ತಮಿಳುನಾಡಿನಲ್ಲಿದ್ದ ಸಾಮಾಜಿಕ ಚಳವಳಿ, ಮತ್ತು ದ್ರಾವಿಡ ಪಕ್ಷಗಳು ಕೈಗೊಂಡ ವಿದ್ಯಾಸಂಸ್ಥೆಗಳಲ್ಲಿನ ಆರಕ್ಷಣಾ ನೀತಿಯಿಂದಾಗಿರಬಹುದು ಎಂದು ಅಜಂತಾ ಹೇಳುತ್ತಾರೆ. ಶ್ರೇಷ್ಠವೆಂಬ ಹಣೆಪಟ್ಟಿಯಿದ್ದ 'ಗಿಂಡಿ ಇಂಜಿನಿಯರಿಂಗ್ ವಿದ್ಯಾಸಂಸ್ಥೆ'ಯಲ್ಲಿ ಅವಕಾಶಗಳು ತಕ್ಕಮಟ್ಟಿಗೆ ಸಿಗುತ್ತಿಲ್ಲ ಎನ್ನುವ ವಾದದೊಂದಿಗೆ ಸವರ್ಣ ಸಮುದಾಯ ಐಐಟಿಯತ್ತ ವಾಲುತ್ತದೆ. ಸವರ್ಣರೇ ತುಂಬಿರುವ ಈ ಜಾಗ ಹೊಸ ಶ್ರೇಷ್ಠತೆಯ ಪರಿಭಾಷೆಯನ್ನು ನೀಡುತ್ತಾ ಒಂದು ದ್ವೀಪವಾಗಿ ನಿಂತುಬಿಡುತ್ತದೆ. ಸವರ್ಣ ಜಾತಿಗೂ ಪ್ರತಿಭೆಗೂ ವಿಚಿತ್ರವಾಗಿ ತಾಳೆ ಹಾಕುವ ಈ ಪ್ರಕ್ರಿಯೆ ಐಐಟಿ ಪದವೀಧರರದೇ ಮತ್ತೊಂದು ಜಾತಿಯನ್ನೂ ನಿರ್ಮಿಸಲು ಪ್ರಾರಂಭಿಸುತ್ತದೆ.

ಈ ಹಿನ್ನೆಲೆಯಲ್ಲಿ ನಾವು ಐಐಟಿಗಳು ಮುಂದುವರೆದು ಬಂದ ದಾರಿಯನ್ನು ಕಾಣಬೇಕು. ಅಲ್ಲಿಂದ ತೇರ್ಗಡೆಯಾದವರು ಹೆಚ್ಚಿನಂಶ ಯಾವ ರೀತಿಯ ಕೆಲಸ ಮಾಡುತ್ತಿದ್ದಾರೆ ಎನ್ನುವುದನ್ನು ಗಮನಿಸಿದಾಗ ನಮಗೆ ವೇದ್ಯವಾಗುವುದು ಒಂದು ವಿಚಿತ್ರ ಸತ್ಯ. ಲೆಕ್ಕ, ಗಣಿತ, ಓದು, ಬೌದ್ಧಿಕತೆ, ಪರೀಕ್ಷೆಗಳಲ್ಲಿ ತೇರ್ಗಡೆಯಾಗುವುದು ಮತ್ತು ಒಗಟು–ಪದಬಂಧಗಳಂತಹ ಗಂಟುಗಳನ್ನು ಬಿಡಿಸುವ, ಮಾದರಿಗಳನ್ನು ಗುರುತಿಸುವ ಕಲೆಯಲ್ಲಿ ಈ ವಿದ್ಯಾರ್ಥಿಗಳು ನಿಷ್ಣಾತರಾಗುತ್ತಾರೆ. ಹೀಗಾಗಿಯೇ ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಮುಂದುವರೆಯದೇ ಎರಡು ಭಿನ್ನ ಮಾರ್ಗಗಳನ್ನು ಆಯ್ದುಕೊಳ್ಳುತ್ತಾರೆ. ಒಂದು, ಪರೀಕ್ಷೆಗಳನ್ನು ಗೆದ್ದು ಮುಂದುವರೆವ ಕಾಯಕಗಳು – ಐಐಎಂನಂತಹ ಸಂಸ್ಥೆಗಳಲ್ಲಿ ಉನ್ನತ ವಿದ್ಯೆ, ಯುಪಿಎಸ್‌ಸಿ ಪಾಸು ಮಾಡಿ ಸರ್ಕಾರಿ ಸೇವೆ, ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ಉನ್ನತ ವ್ಯಾಸಂಗ ನಡೆಸಿ – ಆರ್ಥಿಕ ಮತ್ತು ವ್ಯಾಪಾರ ಜಗತ್ತಿನಲ್ಲಿ ಕಾಯಕವನ್ನು ಕಂಡುಕೊಳ್ಳುತ್ತಾರೆ. ಇಲ್ಲವೇ, ಬೌದ್ಧಿಕತೆಯೇ ಮೂಲವಾಗಿರುವ ಭೌತಿಕತೆ ಗೌಣವಾಗಿರುವ ವಿಶ್ಲೇಷಣಾ ಜಗತ್ತು – ಮುಖ್ಯವಾಗಿ ಸಾಫ್ಟ್‌ವೇರ್ ಜಗತ್ತಿಗೆ ಲಗ್ಗೆಯಿಡುತ್ತಾರೆ.

ಇಲ್ಲಿ ಒಂದು ವಿಷಯವನ್ನು ನಾವು ಮುಖ್ಯವಾಗಿ ಗಮನಿಸಬೇಕು: ಬೌದ್ಧಿಕತೆ, ವಿಶ್ಲೇಷಣೆಯೇ ಮೂಲವಾಗಿರುವ ಸಾಫ್ಟ್‌ವೇರ್ ರೀತಿಯ ವ್ಯಾಪಾರಕ್ಕೆ ದೊಡ್ಡ ಯಂತ್ರಗಳ, ಭೂಮಿ–ಭವನಗಳಲ್ಲಿ ಹೂಡಿಕೆ ಮುಖ್ಯವಾಗುವುದಿಲ್ಲ. ಹೀಗಾಗಿ, ಪರಂಪರಾಗತ ವ್ಯಾಪಾರ ವರ್ಗವನ್ನು ಮೀರಿ ಇಲ್ಲಿ ಉದ್ಯಮಶೀಲತೆಯನ್ನು ಪ್ರದರ್ಶಿಸಬಹುದು. ಹೀಗಾಗಿ, ಈ ಉನ್ನತ ವ್ಯಾಸಂಗದ ಗಾಳಿಗೋಪುರಗಳಿಂದ ಹೊರಬಂದಿರುವ ನವಬ್ರಾಹ್ಮಣರ ಒಂದು ಹೊಸ ಉದ್ಯಮಶೀಲತೆಯ ಜಾತಿ ಉದಯವಾಗುತ್ತದೆ. ಕ್ಯಾಂಪಸ್ಸಿನಲ್ಲಿ ಮೊದಲ ಕೆಲವು ದಶಕಗಳಲ್ಲಿ